# ಗುರುಗೋವಿಂದವಿಠಲರು

Contributed by Sri Pranesh R Hejib , Bangalore

1

ವಿಜಯರಾಯ । ಗುರು । ವಿಜಯರಾಯ ಪ

ವಿಜಯರಾಯ । ಗುರು । ವಿಜಯರಾಯ ಅ.ಪ.

ಎರಡನೆ ಯುಗದೊಳು । ವಿ । ಸುರಆೀಲ ಕಪಿಯಾದ್ಕೊ ।ವಿ।

ಹರಿಕಾರ್ಯಕನುವಾಗಿ । ವಿ । ಹರಿಕರುಣ ಪಾತ್ರನೆ । ವಿ । 1

ಶಕಟ ಭಂಜನ ಪಾದ । ವಿ । ಸುಕಮಲವ ಸೇವಿಸೆ । ವಿ ।

ಪ್ರಕಟ ಯಾದವರಲ್ಲಿ । ವಿ । ನಿಕಂಪಾನೆನಿಸೀದೆ । ವಿ । 2

ವರ ಕಲಿಯುಗದೊಳು । ವಿ । ಪುರಂದರ ದಾಸರೋಳ್

ತುರುಕರು ನೀನಾಗಿ । ವಿ । ಹರಿಚರಿತೆ ಕೇಳದೆ । ವಿ । 3

ಧರೆ ಸುರ ಜನುಮದಿ । ವಿ । ಗುರು ಮಧ್ವಪತಿಯಾಗಿ । ವಿ ।

ಗುರು ಚರಣ ಸೇವಿಸಿ । ವಿ । ಪರ ವಿದ್ಯಾರ್ಜಿಸಿದ್ಯೋ । ವಿ । 4।

ಗುರು ವಾಜ್ಞದಿ ಮತ್ತೆ । ವಿ । ತಿರಿಪಾದ ಪೂರೈಸೆ ವಿ ।

ವರ ಭೂಸುರನಾಗಿ । ವಿ । ಹರಿಚರಿತೆ ಪೇಳದೆ । ವಿ । 5

ವರಯುವ ವತ್ಸರ । ವಿ । ಎರಡು ನಾಲ್ಕರ ಮಾಸ । ವಿ ।

ಎರಡು ಐದನೆ ದಿನ । ವಿ । ಗುರುವಾರ ಪ್ರಹರದಿ । ವಿ । 6

ವರಯೋಗ ಮಾರ್ಗದಿ । ವಿ । ಗುರು ಗೋವಿಂದ ವಿಠಲನ । ವಿ ।

ಚರಣಾಬ್ಜ ಸೇರುತ । ವಿ । ಮೆರೆವೆ ಭಕ್ತರ ಮನದಿ । ವಿ । 7

2

ಆನಂದ ಗಿರಿ ಪತಿ ವಿಠಲ । ಶ್ರೀನಿವಾಸ ಪ

ದೀನ ಜನ ಮಂದಾರ । ನೀನಿವನ ಸಲಹೋ ಅ.ಪ.

ಮಾಧವನೆ ಭಿನ್ನವಿಸೆ । ಸಾಧನ ಸುಜೀವಿ ಇವ

ಹಾದಿ ಹೋಕರ ಉದಯ । ತೋರ್ವ ಸ್ವಭಾವ

ವೇದೋಕ್ತ ಕರ್ಮದಲಿ । ಮೋದವನೆ ತೋರುತಿಹ

ಹೇ ದಯಾಂಬುಧೆ ಘನ್ನ । ಮೋದ ಉಣಿಸಿವಗೇ 1

ಪ್ರಾಚೀನ ಕರ್ಮಾಂಧ । ಕೂಪದಲಿ ಬಿದ್ದಿಹೆನೊ

ಖೇಚರೊತ್ತಮ ಪ್ರಾಣ । ಮತದಿ ಬಂದಿಹನೋ

ವಾಚಿಸುತ ಇವನಲ್ಲಿ । ನಿಚೋಚ್ಚ ತರತಮನ

ಮೋಚಿಸೋ ದುಷ್ಕರ್ಮ । ಕೀಚಕಾರಿ ಪ್ರಿಯಾ 2

ದಾಸ ದೀಕ್ಷೆಯಲಿ ಮನ । ದಾಶಿ ಬಲು ಇಟ್ಟಿಹೆನೊ

ಶ್ರೀಶ ತೈಜಸನೀನೆ । ಲೇಸು ಸತ್ವಂಥಾ ।

ಸೂಸಿ ತೋರಿಹೆ ಹರಿಯೇ । ಹೇ ಸದಾಶಿವ ವಂದ್ಯ

ಕ್ಲೇಶ ನಾಶನ ಕಾಯೊ । ವಾಸವಾನುಜನೇ 3

ತೈಜಸನೆ ನೀ ತೋರ್ದ । ತೇಜರೂಪೋಪಾಸಾ

ಮಾಜದಲೆ ಪೇಳಿರುವೆ । ವಾಜಿವದನಾ ।

ಸೋಜಿಗದ ತರಳನಿಗೆ । ಓಜಸ್ಯ ಪಾಲಿಸುತ

ರಾಜಿಸೋ ಇವನಲ್ಲಿ । ಮೂಜಗತ್ಪತಿಯೇ 4

ಸರ್ವಾಂತರಾತ್ಮ ತವ । ದಿವ್ಯ ಸಂಸ್ಕೃತಿಯನ್ನ

ಸರ್ವತ್ರ ಸರ್ವದಾ । ಓವಿ ಪಾಲಿಪುದೋ ।

ದುರ್ವಿ ಭಾವ್ಯನೆ ಗುರೂ । ಗೋವಿಂದ ವಿಠಲಯ್ಯ

ದರ್ವಿ  ಜೀವಿಯ ಕಾಯೊ । ಬಿನ್ನವಿಪೆ ಹರಿಯೇ 5

3

ಇಂದು  ಭಾಗ ಹರಿ  ವಿಠಲ । ಪೊರೆಯ ಬೇಕಿವಳಾ ಪ

ನೊಂದಿಹಳೊ ಬಹುವಾಗಿ । ಹೇಸಿ ಸಂಸ್ಕೃತಿಲೀ ಅ.ಪ.

ಕರುಣಾಸಾಗರ ವಿನುತ  । ಪರಿಪರಿಯ ಶಾಸ್ತ್ರಗಳು

ವರಲುತಿದೆ ಶ್ರೀಹರಿಯೆ । ಮೊರೆ ಕೇಳದೇನೋ

ತರುಣಿ ದ್ರೌಪದಿವರದ । ಕರಿವರದ ನೀನೆಂದು

ಮರಳಮಹಪಾಪಿ ಆ । ಅಜಾಮಿಳವರದಾ 1

ಉಸಿರಿದ್ದು ಭಾರವನು । ಹೊರುಎಂದು ಪೇಳ್ವಹುದು

ಉಸಿರಳವ ಪರಿಮಾಡೆ । ಮೊರೆ ಆವನಿಡುವಾ

ಬಸಿರಿನಿಂ ಬಂದಂಥ । ಶಿಶುಗಳೆಲ್ಲವೂ ಪೋಗಿ

ಯಶವ ವರ  ಮೆರೆಸಲ್ಕೆ । ಹಸುಮಗನಸಲಹೋ 2

ಸಂಸಾರ ಕ್ಲೇಶಗಳ । ಶಿಂಸಿಸಲು ಅಳವಲ್ಲ

ಕಂಸಾರಿ  ನಾವಾಗಿ । ಪೊರೆಯ ಬೇಕಿವಳಾ

ವಂಶ ಉದ್ಧರಿಸೆ ಪದ । ಪಾಂಸು ಬೇಡ್ವಳೊ ನಿನ್ನ

ಸಂಶಯವು ಯಾಕಿನ್ನು । ಕರುಣಿಸೋ ಹರಿಯೆ 3

ನಂದಮುನಿ ಮತವನ್ನು । ಪೊಂದಿ ಜೀವಿಪಳೊ ಸಂ

ಕ್ರಂದ ನಾದಿಗಳಿಂದ । ವಂದ್ಯ ಶ್ರೀಹರಿಯೇ

ಅಂದ ಈ ಕಾರಣದಿ । ನಂದವನು ಈಯದಿರೆ

ಅಂದುಕೊಂಬರೆ ಸುಜನ  । ತಂದೆ ಕೈಪಿಡಿಯೋ 4

ಜ್ಞಾನ ಸದ್ಭಕುತಿ ವೈ । ರಾಗ್ಯ ಕೊಟ್ಟವಳೀಗೆ
ಕಾಣಿಸೋ ಸದ್ಗತಿಯ । ಕಾರುಣ್ಯ ಮೂರ್ತೇ
ಏನೊಂದು ಅನ್ಯವನು । ನಾನು ಬೇಡುವುದಿಲ್ಲ
ಜಾಣಗುರು ಗೋವಿಂದ । ವಿಠಲಾ ಪೊರೆ ಇವಳಾ 5
4

ಉತ್ತರಾದಿಯ ಮಠದ ಪೀಠವಾಸಾ ಪ
ಸತ್ಯಧರ್ಮಾಖ್ಯ ಯತಿ ಭಕ್ತ ಜನ ಪೋಷಾ ಅ.ಪ.
ಪಂಚಮುಖ ಪ್ರಾಣನೂಪಾಸಕನೆ ಎನ್ನ
ವಂಚಿಸದೆ ಭವದೊಳಗೆ ಕಾಯೊ ಬೇಗಾ ।
ಸಂಚಿತವ ಪರಿಹರಿಸೊ ವಾಂಛಿತಾರ್ಥದ ಹರಿಯ
ಮಂಚ ಪದ ಯೋಗ್ಯಾಂಶ ಸಂಭೂತ ಯತಿಯೇ 1
ಭದ್ರೆ ತೀರದಿ ವಾಸ ಭವದುಪದ್ರವ ಕಳೆಯೊ
ಕಾದ್ರ ವೇಯನ ಪದವು ಭದ್ರ ನಿನಗೇ ।
ಮಾದ್ರ ವೇಯಾಗ್ರಜಗೆ ವಲಿದಿತ್ತೆ ಅಸ್ತ್ರವನು
ರೌದ್ರ ಮೂರುತಿ ಕಾಯೋ ಗುರು ವರೇಣ್ಯಾ 2
ಪ್ರಾಜ್ಞ ಮೂರುತಿ ಹರಿಯ ಆಜ್ಞೆಯನು ಸ್ವೀಕರಿಸಿ
ಸುಜ್ಞ ನೀ ರಚಿಸಿದೆಯೊ ಭಾಗವತ ವ್ಯಾಖ್ಯಾ ।
ಸಜ್ಜನೋದ್ಧಾರಿಯನ್ನ ಜ್ಞಾನ ಪರಿಹರಿಸಿ
ವಿಜ್ಞಾನಮಯ ಹರಿಯ ತೋರ್ವೈಯ್ಯ ಜೀಯಾ 3
ಸತ್ಯವರ ಕರಜಾತ ಶ್ರೀ ಸತ್ಯ ಧರ್ಮಾಖ್ಯ

ನಿತ್ಯ ತವ ಸಚ್ಚರಣ ಸ್ತುತಿಪ ಜನರಾ ।

ಅತ್ಯಧಿಕ ಪ್ರೀತಿಯಲಿ ಹತ್ತಿರಕೆ ಕರೆಯುತ್ತ

ಸತ್ಯ ಮೂರುತಿ ಪುರಕೆ ಎತ್ತೊಯಿವ ಗುರುವೇ 4

ವತ್ಸರ ಸುವಿಕೃತವು ಅಸಿತ ಶ್ರಾವಣದಲ್ಲಿ

ಮತ್ಸ್ಯಾದಿ ದಶ ಮತ್ತೆ ಮೂರನೆಯ ದಿನದೀ ।

ವತ್ಸಾರಿ ಶ್ರೀ ಗುರು ಗೋವಿಂದ ವಿಠ್ಠಲನ

ಹೃತ್ಸರೋಜದಿ ಭಜಿಸಿ ತನುವ ತ್ಯಜಿಸಿದನೇ ೫

೫

ಗೋಪಾಲಕೃಷ್ಣ ಪಾಲಿಸೋ – ತವ ಭವ್ಯವೆನಿಪ

ಶ್ರೀಪಾದಾ ತೋರಿಸೋ ಪ

ಪಾಪಿಯ ಭವ ಕೂಪಾರ ಹರಿಸಿ

ಕೈಪಿಡಿದೆನ್ನನು ಕಾಪಾಡುವುದು ಹರೆ ಅ.ಪ.

ಸೂರ್ಯ ಕೋಟಿ ಸಂಕಾಶ । ಶ್ರೀ ರುಕುಮಿಣೀಶ

ಪ್ರೇರ್ಯ ಪ್ರೇರಕ ಸರ್ವೇಶ

ಕಾರ್ಯಾ ಕಾರ್ಯ ವನರಿಯದವನು ನಾ – ಸುಖ

ವೀರ್ಯ ಸಾರ ಔದಾರ್ಯನೆ ಪಾಲಿಸೊ

ಕಂಸಾರಿ ಬಕವೈರಿ ಮುರ ವೈರಿ । ನಿಜ ಜನ ಭವಹಾರಿ 1

ಗೋಕುಲ ಪಾಲಾ ಹೇ ಬಾಲ – ಸತ್ಯಭಾಮೆ ಲೋಲ

ಶ್ರೀಕರ ಗುಣ ಬಹು ಜಾಲ ಶ್ರೀಕಮಲಜ ಭವ ।

ನಾಕೇಶ ವಿನುತ ಶ್ರೀಕರ ಪದ ಪಲ್ಲವನವ ।

ಲೋಕನ ಕೊಡು ಕರಿವರದ । ಧೃವ ವರದ ।

ಜಿತ ಖಲ ಕುಲ ಸರ್ವಮದ ॥ 2

ವೇದಾಂತ ವೇದ್ಯಾ - ವೇದ ವೇದ್ಯಾ

ವೇದಾತ್ಮಿಕಾರಾಧ್ಯಾ ।

ಆದಿ ಹರಿಯೇ ಗುರು ಗೋವಿಂದ ವಿಠಲ

ಮೋದ ಪ್ರಮೋದ ಸಂ । ಮೋದವ ನೀಯೋ

ಗೋವಿಂದ । ಮುಕುಂದ । ಮುನಿ ವಂದ್ಯ ।

ಧೃತ ವ್ರಜಗಿರಿ ಆನಂದ 3

6

ಜೀವ ಮಾನಿ ಸಂಕರುಷಣ ಪಾಹಿ । ಜೀವ ಮಾನೀ ಪ

ಜೀವಮಾನಿ ವರ ಶ್ರೀವರ ಶಯ್ಯನೆ

ತೀವರ ಪಾಲಿಸು ಪಾವನ ಗಾತ್ರ ಅ.ಪ.

ಶ್ರದ್ಧೆಯ ಸುತ ನೀ । ನಿದ್ದುದೆ ಸರಿ ಹರಿ

ಶ್ರದ್ಧೆಯ ನೀಯುತ । ಉದ್ಧರಿಸೆಮ್ಮ 1

ಬಲನೆನಿಸುತ ಗೋ । ಕುಲದೊಳಗುದಿ ಸುತ

ಅಲವ ಪೂರ್ಣ ಹರಿ । ಒಲವನು ಪಡೆದೇ 2

ತಾಮಸ ಹರ ಪಿತ । ತಾಮಸ ಕಳೆ ಸು-

ತ್ರಾಮ ವಂದ್ಯ ತ್ರೈ । ಧಾಮಗೆ ಪ್ರೀಯ 3

ರಾಮಾಭಿಧ ಹರಿ । ಸೋಮಾಸ್ಯನ ಸಂ-

ಪ್ರೇಮಾಸ್ಪದ ಗುರು । ಸೌಮಿತ್ರೀಯೆ 4 ।

ಮಾವ ವೈರಿ ಗುರು । ಗೋವಿಂದ ವಿಠಲನ
ಭಾವವ ನೋಳ್ಪ ಸು । ಭಾವವ ನೀಯೋ 5

7

ಟೀಕಾರ್ಯ – ಟೀಕಾರ್ಯ ಪ
ಕಾಕು ಮತಗಳ ವಿ । ವೇಕದಿ ಖಂಡನ ಅ.ಪ.
ಎತ್ತಾಗಿರುತಿರೆ । ಶಾಸ್ತ್ರಬೋಧ ಶ್ರುತ
ಉತ್ತಮ ಸಂಸ್ಕೃತಿ । ಪೊತ್ತು ಜನಿಸಿದೆ 1
ಲಕ್ಷವಿತ್ತನೀ । ಲಕ್ಷಿಸದಲೆ ಮುನಿ
ತ್ರ್ಯಕ್ಷನಂಶರಿಂ । ಭಿಕ್ಷುಕನಾದವ 2
ಮಧ್ವಶಾಸ್ತ್ರ ದು । ಗ್ಧಾಬ್ಧಿ ಮಥಿಸಿ ಬಹು
ಶುದ್ಧ ಸುಧೆಯ ನೀ । ಮೆದ್ದು ಉಣಿಸಿದೆ 3
ಮೌನಿ ಮಧ್ವಕೃತ । ಮಾನ ಲಕ್ಷಣಕೆ
ಗಾನ ಮಾಡ್ದೆ ಪ್ರ । ಮಾಣ ಪದ್ಧತಿಯ 4
ಪದ್ಧತಿಯಿಂದಲಿ । ವಿದ್ಯಾರಣ್ಯರ
ಸದ್ದಡಗಿಸಿದೆಯೊ । ಬುದ್ಧಿ ಚಾತುರ್ಯ 5
ನಾಗಾವೇಶಿತ । ಯೋಗಿ ವರೇಣ್ಯನೆ
ಕಾಗಿನಿ ತೀರಗ ಭಾಗವತರ ಪ್ರಿಯ 6
ಮಾವಿನೋದಿ ಗುರು । ಗೋವಿಂದ ವಿಠಲನ
ಭಾವ ಕುಸುಮದಿಂ । ದೋವಿ ಪೂಜಿಸುವ 7

8

ಹರಿಯೆ । ಕರುಣ ವಾರಿಧಿಯೆ । ಧೊರೆಯೇ ।

ವರ ಚರಣ ಸೇವೆಯನು ಕೊಡು ಹರಿಯೇ ಪ

ಸರಸಿಯಲಿ ಕರಿರಾಜ । ಕರೆಯಲಂದೂ

ತ್ವರದಿಂದ ನೀ ಬಂದು । ಪೊರೆದೆ ಮುಂದೂ ॥

ಧುರದಲ್ಲಿ ಗಾಂಗೇಯ । ಶರದಿ ಸೆಣೆಸಲು ಅಂದು

ಸರಸದಲಿ ನೀ ಅವನ । ಪೊರೆಯಲಿಲ್ಲವೆ ಎಂದು 1

ದುರುಳ ದುಶ್ಯಾಸನ । ಸೀರೆ ಸಭೆಯಲಿ ಸೆಳೆಯೇ

ತರಳೆ ಪಾಂಚಾಲೆ । ಓಲೆ ಕಳುಹಿದಳೆ ಹರಿಯೆ

ತರುಳೆ ಕೈಗಾಯ ಬೇಕೆಂದು । ನಿನ್ನ ಧೊರೆಯೇ

ಎರಳಾಕ್ಷಿಗಕ್ಷಯ್ಯ । ವಸನಿತ್ತೆ ಹರಿಯೇ 2

ಅಂದು ಬಲತಾಯಿ ಬಾಲಕನ । ತೊಡೆಯಿಂದ ನೂಕೇ ।

ಬಂದು ಕಾನನಕೆ ತಪಗೈದ । ತರಳನನು ಕಾಯ್ದೇ ।

ಇಂದು ನಾ ಮಾಡಿದಪರಾಧ । ವೇನಯ್ಯ ಹರಿಯೇ ।

ಕಂದನಪರಾಧ ಎಣಿಸುವಳೆ । ತಾಯಿ ಧೊರೆಯೇ 3

ಗೌತಮರ ಮಡದಿಯನು । ಕಾಯಲಿಲ್ಲವೆ ಹರಿಯೆ

ಔತಣವ ಕೊಟ್ಟು ಬರ । ಹೇಳದಳೆ ಧೊರೆಯೇ ॥

ವೀತಶೋಕನೆ ಎನ್ನ । ಮೊರೆ ಕೇಳಸದೆ ಹರಿಯೇ

ಔತಪ್ರೋತ ನೀನೆಲ್ಲವನು । ತಿಳಿದಿರುವೆ ಧೊರೆಯೇ 4

ಬಲಿಯ ಯಾಚಿಸುತ । ನೀ ಅವನ ವಂಚಿಸಿದಿ ಹರಿಯೆ

ತಲೆ ಬಾಗಲಲಿ ನಿಂದು । ನೀ ಅವನ ಪೊರೆದೆ ಧೊರೆಯೆ

ಸಲೆ ಬೀದಿ ಬೀದಿಯಲಿ । ನಾ ಕೀರ್ತಿಸುವೆ ಹರಿಯೇ

ಬಲು ದಯಾಪರ ಗುರು । ಗೋವಿಂದ ವಿಠಲೆಂದು ಧೊರೆಯೆ 5

9

ಹನುಮೇಶ ವಿಠ್ಠಲನೆ ಸಲಹ ಬೇಕಿವಳಾ

ಗುಣಪೂರ್ಣ ನಿರ್ದೋಷ ಚಿದ್ಘವನೆ ಹರಿಯೇ ಪ

ನಾಗಕಾಳೀಯ ಮದ ಭಂಜನನೆ ಶಿರಿಕೃಷ್ಣ

ನೀಗಿ ಹೃದ್ರೋಗವನು ಆಗು ಹೋಗುಗಳಾ ।

ನಾಗಶಯನನನೆ ನೀನೆ ಮಾಳ್ಪುದನೆ ತಿಳಿಸುತ್ತಾ

ಭೋಗ ವಿಹ ಪರಧ್ವಂಸ ಭೋಗ ತಿಳಿಸುವುದೋ 1

ಮಧ್ವ ಶಾಸ್ತ್ರಜ್ಞಾನ ಉದ್ಬೋಧ ಕೊಟ್ಟಿವಳ

ಶುದ್ಧ ತರತಮ ಭೇದ ಪಂಚಕವ ತಿಳಿಸಿ ।

ಅದ್ವಿತೀಯನೆ ಭಾವ ದ್ರವ್ಯ ಕ್ರಿಯಗಳು ಎಂಬ

ಅದ್ವೈತ ತ್ರಯಜ್ಞಾನವಿತ್ತು ಪಾಲಿಪುದು 2

ಖಗವರಧ್ವಜದೇವ ಗೋವಿಂದ ಮೂರುತಿಯೆ

ಬಗೆಬಗೆಯ ತವಲೀಲೆ ಮಿಗಿಲು ಸ್ಮೃತಿಯಿತ್ತು ।

ಹಗರಣದ ಸಂಸಾರ ಸಾಗರವ ದಾಟಿಸುತ

ನಿಗಮ ವೇದ್ಯನೆ ತೋರೊ ಹೃದ್ಗುಹದಿ ಹರಿಯೇ 3

ಪತಿಸೇವೆಯಿತ್ತಿವಳ ಕೃತಕಾರ್ಯಳೆಂದೆನಿಸೊ

ಪಿತೃ ಮಾತೃ ಬಂಧುಗಳು ಹಿತ ಜನಾಂತಸ್ಥ

ಕೃತಿ ಪತಿಯೆ ನಿನವ್ಯಾಪ್ತಿ ಮತಿಯಿತ್ತು ಪಾಲಿಸುತ

ಹಿತದಿ ಸಾಧನಗೈಸೊ ವಾತಾತ್ಮ ಹರಿಯೇ 4

ನಿರುತ ತವ ದಾಸತ್ವ ಅರ್ಥಿಯಲಿ ಇರುವಂಥ

ತರಳೆಯನು ಸ್ವೀಕರಿಸಿ ದಾಸಳೆಂದೆನಿಸೊ

ಶರಣ ಜನ ವತ್ಸಲನೆ ಕರುಣಿ ಬಿನ್ನಪ ಸಲಿಸೊ

ಮರುತಾಂತರಾತ್ಮ ಗುರು ಗೋವಿಂದ ವಿಠಲಾ 5

10

ಶ್ರೀಪಾದ ರಾಜರ ಸ್ಮರಣೇ । ಭವ

ತಾಪ ಪರಿಹರ ವೆಂದು ಗಣನೆ ಪ

ಧೃತ – ಶ್ರೀಪತಿ ಶ್ರೀರಂಗವಿಠಲನ ।

ಅಪರೋಕ್ಷದಿ ಕಂಡು ಕುಣಿಯುವ

ತಾಪಸೀಗಳ ದಯದಿ ದುರಿತವು ।

ಪೋಪುದೇನಿದು ನಮಗೆ ಅಚ್ಚರ ಅ.ಪ.

ಲಕ್ಷ್ಮೀನಾರಾಯಣ ದಿವಿಜ । ಮುನಿ ।

ಹೇಮವರ್ಣ ತೀರ್ಥ ಕರಜ

ಕಾಮಾದಿ ದೋಷದಿಂ ವಿರಜ । ಯತಿ ।

ನೇಮ ಸಾಧಿಸಿದರು ಸಹಜ ।

ಧೃತ – ಈ ಮಹಿಮ ಸಂಚರಿಸಿ ಯೋಗ್ಯರ ।

ರಾಮಾಪಾದಾಶ್ರಿತರ ಗೈಸುತ

ಸಾಮ ಸನ್ನುತ ಹರಿಯ ಕೀರ್ತನೆ

ಸ್ತೋಮ ವಿರಚಿಸಿ ತತ್ವನೊರೆದ 1

ಷಷ್ಟ್ಯುತ್ತರ ನಾಲ್ಕು ಶಾಖ । ದಿನ್ನ ।

ಸುಷ್ಠು ಹರಿಗರ್ಪಿಪ ಪಾಕ

ಕಷ್ಟ ಕ್ಲೇಶ ರಹಿತ ಸುಖ । ಭೋಗ ।

ಶ್ರೇಷ್ಠಾನುಭವವು ಆಲೋಕ ।

ಧೃತ - ನಿಷ್ಠೆಯಲಿ ಪೂಜಾದಿ ಗೈಯ್ಯುತ ।

ವಿಠ್ಠಲನ ಉತ್ಕರ್ಷ ತಿಳಿಸುತ

ನೆಟ್ಟಮನ ಹರಿಯಲ್ಲಿ ಇರುವರ ।

ದಿಟ್ಟ ಭಕುತರ ಗೈವ ಸುಕೃತ 2

ತೀರ್ಥಕ್ಕೆ ಗಂಗೆಯ ತಂದ । ವಿಪ್ರ ।

ಹತ್ಯದಘ ನೃಪಗಿಲ್ಲೆಂದ

ಮತ್ತೆ ತೋರ್ದ ಮಹಿಮೆ ವೃಂದ ।

ಧ್ರುವ । ಕೃತ್ಯ ಹರಿಗರ್ಪಿಸಿನಿಂದ ।

ಧೃತ - ಭೃತ್ಯರಿಗೆ ತತ್ವಾರ್ಥ ನೊರೆಯುತ ।

ಸತ್ಯ ಗುರುಗೋವಿಂದ ವಿಠಲನ

ನಿತ್ಯಸಂಕೀರ್ತನದಿ ನೃತ್ಯದಿ ।

ತೃಪ್ತಿ ಬಡಿಸಿದ ಯತಿ ವರೇಣ್ಯ 3

11

ಶ್ರೀ ಗೋವಿಂದ ವಿಠಲನೆ । ಕಾಪಾಡ ಬೇಕಿವಳಾ ಪ

ಹೇ ಗರುಡ ಧ್ವಜನೆ ಹರಿ । ನಿನ್ನ ಮೊರೆ ಹೊಕ್ಕವಳಾ ಅ.ಪ.

ಸ್ವಾಪದಲಿ ಸೂಚಿಸಿದ ಪರಿ । ಶ್ರೀ ಪತಿಯೆ ನಿನ್ನಂಕಿತವ

ಉಪದೇಶಿಸಿರುವೆನೋ । ಮನ್ನಿಸಿ ಕಾಯೋ

ಕಾಪಟ್ಯ ರಹಿತಳೂ । ಹರಿ ದರ್ಶನಾಕಾಂಕ್ಷೆ

ಕೈಪಿಡಿದು ಕಾಪಾಡೊ । ಆಪನ್ನ ಪರಿಪಾಲಾ 1

ಲೌಕಿಕದ ಮಮತೆಗಳ । ನೀ ಕಡಿದು ಕಾಪಾಡೊ
ಏಕಮೇವನ ದೇವ । ಪ್ರಾಕ್ಕು ಕರ್ಮವ ಕಳೆದು
ಭಕುತಿ ಜ್ಞಾನವನಿತ್ತು । ಕಾಪಾಡೊ ಹರಿಯೇ
ಯುಕುತಿಯಲಿ ನಿನ್ನಂಥ । ದೇವರನ ಕಾಣಿಸಯ್ಯ 2
ಪಾಂಚ ಭೌತಿಕ ದೇಹ । ಅಸ್ಥಿರತೆ ತಿಳಿಸುತ್ತ
ಪಂಚಾತ್ಮ ನಿನ ಧ್ಯಾನ । ಮಗ್ನಳೆಂದೆನಿಸೊ ।
ಸಂಚಿತಾಗಾಮಿಗಳ । ನಾಶ ಗೈಸುತಲಿತ್ತ
ಕೊಂಚಮಾಡೊ ಪ್ರಾರಬ್ಧ । ಗುರು ಗೋವಿಂದ ವಿಠಲ 3

12

ಶಿವ ಶಿವ ಶಿವ ಶಿವ – ಶಿವರಾಯ । ನಮ್ಮ
ಭವ ಭಯ ಪರಿಹರ ಮಹರಾಯ ಪ
ಮಂಗಳರೂಪಿ ಗೌ । ರಾಂಗನೆ ದೂರ್ವಾಸ
ತಿಂಗಳ ಧರಿಸಿಹ । ಅಂಗಜ ಮದಹಾ ।
ಭಂಗ ಬಡಿಪ ಭವ । ಭಂಗಿಸಿ ಸುಜನರ
ಸಂಗವ ಕೊಡಿಸೊ ನೀ । ಲಾಂಗನ ಪ್ರಿಯ ಸಖ 1
ಪರಿಸರ ಸಂಸ್ಕೃತ । ಗರಳವ ಭುಂಜಿಸಿ
ಸುರರನು ಪೊರೆಯುವೆ । ಕರಿಗೊರಳಾ ।
ಮುರಳಿಯ ಧರ ಸಿರಿ । ಕರಿವರದನ ದಯ
ನಿರುತ ನಿನ್ನೊಳಗುಂಟು । ಪೊರೆಯೊ ಮೃತ್ಯುಂಜಯ 2
ಸ್ವಾಪದಿ ಗರಸಹ । ರೂಪವ ತೋರ್ದೆ – ಸು–
ರಾಪಗಧರ ಹರ । ತಾಪಸಿ ಶುಕನೇ ।

ಗೋಪತಿ ಗುರು ಗೋ । ವಿಂದ ವಿಠಲನ

ರೂಪವ ತೋರಿಸಿ । ನೀ ಪರಿಪೋಷಿಸು 3

13

ಶ್ರೀ ಲಕ್ಷ್ಮೀಶ ವಿಠಲಾ । ರಕ್ಷಿಸೋ ಇವನಾ ಪ

ಕುಕ್ಷಿಯೊಳಗನ್ಯರನೆ । ರಕ್ಷಕರ ಕಾಣೇ ಅ.ಪ.

ಮಧ್ವ ಮತದಲ್ಲಿವನು । ಶ್ರದ್ಧೆ ಭಕ್ತಿಯುತನು

ಪದ್ಧತಿಗಳಳವಡಿಸಿ । ಶುದ್ಧ ಸಾಧನದಾ ।

ಅಧ್ಯಯನಕೆಳೆ ತಂದು । ಬದ್ಧನನ । ಮಾಡುತ್ತಾ

ಉದ್ಧರಿಸೋ ಶ್ರೀ ಹರಿಯೇ ಪದ್ಮನಾಭಾಖ್ಯಾ 1

ಭಂಗವಿಲ್ಲದೆ ಇವಗೆ । ಮಂಗಳವು ಎಂದೆನಿಪ

ಶ್ರೀ ಶೃಂಗಾರ ನಾಮಸ್ಮೃತಿ । ಶ್ರೀ ರಂಗನಾಥಾ

ಸಂಘಟಿಸಿ ಉದ್ಧರಿಸೋ । ಸ್ವಾಂಗಾಯ ನಾಮಕನೆ

ಸಂಗೀತ ಲೋಲ ಹರಿ । ರಂಗ ಭವ ಹಾರೀ2

ಆರೋಗ್ಯ ಭಾಗ್ಯವನು ಕರುಣಿಸುತ ಇವನೀಗೆ

ದ್ವಾರವಾಗಲಿ ಅದುವೇ । ಸಾರ ಸಾಧನಕೇ

ಚಾರು ನಿನ್ನಯ ನಾಮ । ಸಾರ ಸವಿ ಸವಿದುಂಬ

ಭಾರಣಯಲಿರಿಸಯ್ಯ । ಮಾರಪಿತ ಹರಿಯೇ 3

ಕರ್ಮಗಳ ಮಾಳ್ಪುವಲಿ । ಮರ್ಮಗಳ ತಿಳಿಸಯ್ಯ

ನಿರ್ಮಮತೆ ನೀಡುತ್ತ । ಧರ್ಮ ಸಾಧಕನೇ

ಕರ್ಮನಾಮಕ ಹರಿಯೇ । ಪೇರ್ಮಣಯಲಿ ಇವನನ್ನು

ಕ್ರಮ್ಮಿಸೋ ಕರುಣದಲಿ । ಧರ್ಮಗುಪಾಧರ್ಮಿ 4

ಧಾವಿಸಿ ಬಂದಿಹನು । ದೇವ ತವ ದಾಸ್ಯಕೆನೆ

ಭಾವಕನಿಗಿತ್ತಿಹೆನೊ । ಓವಿ ಉಪದೇಶಾ

ಗೋವಳರ ಪ್ರಿಯ ಗುರು । ಗೋವಿಂದ ವಿಠಲನೆ

ನೀ ಪೊಲಿದು ಪೊರೆ ಇವನ । ದೇವ ದೇವೇಶಾ 5

14

ಲಕ್ಷ್ಮೀನಾಥ ವಿಠಲ । ರಕ್ಷಿಸೊ ಇವನಾ ಪ

ಇಕ್ಷುಚಾಪನ ಪಿತನೆ । ಅಕ್ಷರನೆ ದೇವಾ ಅ.ಪ.

ಭಕ್ತಿಯುತ ಇವನಿರುವ । ಶಕ್ತಿಯಿಂ ಸಾಧಿಸುವ

ಮುಕ್ತರೊಡೆಯನೆ ಹರಿಯ । ನಿತ್ಯ ತೃಪ್ತಾತ್ಮಾ

ಅರ್ಥಿಯಲಿ ಲಕ್ಷ್ಮಿಯನು । ಭಕ್ತಿಯಿಂ ಸೇವಿಸುತ

ಪ್ರಾರ್ಥಿಸುವ ತವಪ್ರೀತಿ । ಲಕ್ಷ್ಮಿವಲ್ಲಭನೇ 1

ಅಪ್ರಮೇಯನ ಪತ್ನಿ । ಲಕ್ಷ್ಮಿಯನೆ ತುತಿಸುತ್ತ

ಸುಪ್ರಸಾದವ ಕೊಂಡು । ಗೃಹಕಾಗಿ ತೆರಳೀ

ಅಪ್ರತಿಮ ಸಂತಸದಿ । ಹರಿಯ ಕೊಂಡಾಡುತ್ತ

ಅಪ್ಪವೆಂಕಟನನ್ನು । ಹಾಡಿ ಹೊಗಳಿದನಾ 2

ವೇದಾಂತ ವೇದ್ಯ ಹರಿ । ವೇದ್ಯವಾಗಲಿ ಇವಗೆ

ಮೋದ ತೀರ್ಥರ ಮತದ । ಸಾದು ತತ್ವಗಳು

ಹಾದಿಯಾಗಲಿ ಮುಕುತಿ । ಸಾಧನ ಸುಮಾರ್ಗಕ್ಕೆ

ಬಾದರಾಯಣ ದೇವ । ಮಾಧವನೆ ಹರಿಯೆ 3

ಕರ್ಮಮರ್ಮವ ತಿಳಿಸಿ । ದುಷ್ಕರ್ಮ ಪರಿಹರಿಸಿ

ನಿರ್ಮಮನ ಮಾಡಯ್ಯ । ಬ್ರಹ್ಮಾದಿ ವಂದ್ಯ

ಪ್ರಮ್ಮೆಯಂಗಳ ಬೋದ । ಸಲ್ಲಲಿತವಾಗಿರಲಿ

ಅಮ್ಮಹಾ ಪರದೈವ । ಹರಿಯೆಂದು ತಿಳಿಸೊ 4

ಅದ್ವೈತ ತ್ರಯದರಿವು । ಬುದ್ಧಿಗೇ ನಿಲುಕಿಸುತ

ಸಿದ್ಧಾಂತ ಪಥವೆಂಬ । ಹೆದ್ದಾರಿ ನಡಸೋ

ಕೃದ್ಧಬಳಮರ್ದನನೆ । ಮುದ್ದು ನರಹರಿದೇವ

ಅದ್ವಿತೀಯನೆ ಗುರು । ಗೋವಿಂದ ವಿಠಲಾ 5

15

ಯತಿಕುಲಾಂಬುಜ ಸ್ತೋಮ ಸೂರ್ಯ । ಕಾಯೊ

ಯತಿ ಸತ್ಯ ಧ್ಯಾನಾಖ್ಯವರ್ಯಾ ಪ

ಧೃತ – ಕ್ಷಿತಿಯೊಳಗೆ ದುರ್ಮತವ ಖಂಡಿಸಿ ।

ಅತಿಹಿತದಿ ದ್ವೈತವನೆ ಬೋಧಿಸಿ

ವಿತತ ಹರಿ ಪರನೆಂದು ಸಾಧಿಸಿ ।

ಮತಿಯ ಮನುಜರ್ಗೊರೆದ ತಾಪಸಿ ಅ.ಪ.

ತಪಸೀ ಸತ್ಯ ಜ್ಞಾನರ ಕರಜಾ । ಸ್ವಾಮಿ

ಶ್ರೀಪ ರಾಮರ ಪಾದ ವನಜಾ ।

ಸಾಪರೋಕ್ಷೀಕೃತ ಯತಿಜ । ತೋರೊ

ಸುಪಥ ಮುಕ್ತಿಗೆ ಹತ ದಿತಿಜ ।

ಶ್ರೀ ಪತಿಯ ಚರಣಾಬ್ಜ ಮಧುಪನೆ ।

ಕೋಪ ಸಲ್ಲದು ಕೃಪೆ ಪಯೋನಿಧಿ

ಪಾಪ ರಹಿತನ ಮಾಡಿಯನ್ನನು ।

ಪ್ರಾಪಿಸೆನಗೆ ಜ್ಞಾನಖ್ಯ ಸೂರ್ಯನ 1

ಕಾಶಿ ರಾಮೇಶ್ವರ ಕುಂಭ । ಕೋಣ

ದೇಶ ಯಾತ್ರೆಗಳ್ಮಾಡಿ ಡಿಂಬಾ ।

ಮೀಸಲೆನಿಸಿ ಜಯಸ್ತಂಭಾ । ಹೂಡಿ

ಶ್ರೀಶ ಸರ್ವೋತ್ತಮನೆಂಬಾ ॥

ಭಾಷೆಯನು ಕೈಗೊಂಡು ಚರಿಸುತ ।

ಕೃಷಿಯ ಮಾಡಿದೆ ಹರಿಯ ಮತವನು

ತೋಷಿಸಿದೆ ಸದ್ವೈಷ್ಣವೃಂದವ ।

ವಿಶದ ವಿದ್ವತ್ಸಭೆಯ ನೆರೆಸೀ 2

ಚಿತ್ತ ವಿಡುತ ಲಯದಿ ಚಿಂತನಾ । ಸಾರಿ

ಸತ್ಯ ಪಾಂಡುರಂಗ ವಿಠಲನಾ ।

ಹತ್ತಿರ ಕಿತ್ತೊಗೆದೆ ತನುವಿನ ವರ

ಚೈತ್ರ ಶುಕ್ಲದಿ ಆರೆಡನೆ ದಿಣ ।

ಕ್ಷಾತ್ರ ತೇಜದಿ ಮೆರೆದೆ ಗುರುವರ ।

ಕ್ಷಿತಿಯೊಳಗೆ ಸುರಾರು ನಿಮಗೆ

ವಿತತ ಗುರುಗೋವಿಂದ ವಿಠಲನ ।

ಚಿತ್ತದಲಿ ಸ್ಮರಿಸುತ್ತ ಪೊರಟ 3

16

ಭೀಮಾ ತಟಗ ವಿಠಲ । ಕಾಪಾಡೊ ಇವಳಾ ಪ

ಸಾಮ ಸನ್ನುತ ದೇವಾ । ಪ್ರಾರ್ಥಿಸುವೆ ಹರಿಯೇ ಅ.ಪ.

ಮರುತದಲ್ಲಿಹಳು । ತರುಣಿ ಬಹು ಭಕ್ತಿಯಲಿ

ಹರಿದಾಸ್ಯ ಕುಂಕ್ಷಿಪಳು । ಕರಿವರದ ದೇವಾ ।
ಗುರುಕರುಣ ಸ್ವಪ್ನದಲಿ । ಹರಿದಾಗಿ ಪಡೆದಿಹಳು
ತರಳೆಜ್ರಪತಿ ವರದ । ಪರಿಪಾಲಿಸಿವಳಾ 1
ಪಂಚ ಪಂಚಿಕೆಯ ಪ್ರ । ಪಂಚ ಸತ್ಯತ್ವವನು
ಪಂಚ ಭೇದಗಳರುಹಿ । ಕಾಪಾಡೊ ಹರಿಯೇ ।
ಅಂಚೆ  ವಹ ಪಿತನೆ ಸ । ತ್ತರತ ಮತ ತಿಳಿಸುತ್ತ
ಪಂಚರೂಪಾತ್ಮಕನೆ । ಕೈಪಿಡಿಯೊ ಇವಳಾ 2
ಭೋಗಗಳ ಉಂಬಾಗ । ಭೋಗಿರಥೀ ಪಿತನ
ಜಾಗುಮಾಡದೆ  ಸ್ಮರಿಪ । ಭಾಗ್ಯವನೆ ಕೊಟ್ಟೂ ।
ಆಗುಹೋಗುಗಳೆಂಬ । ದ್ವಂದ್ವ ಸಹನೆಯನಿತ್ತು
ನೀಗೊ ಭವಸಾಗರವ । ಕಾರುಣ್ಯಮೂರ್ತೇ 3
ಪತಿಯೇ ಪರದೈವವೆಂ । ಬತುಳ ಶುಭಮತಿಯಿತ್ತು
ಗತಿಗೋತ್ರ ನೀನೆಂದು । ಸತತ ಚಿಂತಿಸುತಾ ।
ಮತಿವರಾಂ ವರರಂಘ್ರಿ । ಶತಪತ್ರಸೇವೆಯನು
ರತಿಯಿಂದ ಗೈವಂಥ । ಮತಿನೀಡೊ ಹರಿಯೇ 4
ಸಂತಾನ ಸಂಪತ್ತು । ಶಾಂತಿಪತಿ ನೀನಿತ್ತು
ಕಾಂತುಪಿತ ಸೇವೆನ್ನೈ । ರಂತರದಿ ಗೈವಾ ।
ಪಂಥದಲಿ ಇರಿಸು ಗುರು  । ಗೋವಿಂದ ವಿಠ್ಠಲನೆ
ಇಂತಪ್ಪ ಪ್ರಾರ್ಥನೆಯ । ಸಲಿಸೋ ಶ್ರೀ ಹರಿಯೇ5
17

ಬಂದನು ಹನುಮಂತ ಗೃಹಕೇ । ಕಾರ್ಯ

ಸಂಧಿಸಲು ಅನುಗ್ರಹಕೇ ಪ

ಮಂದಿರವು ಒಂಟೀಲು ವಂಶ ಸಿ ।

ಕಂದರಾಬಾದಿನಿಂದಲಿ

ಸುಂದರನು ಬಹುನಂದ ವೀಯುತ ।

ಮಂದವಾರದಿ ಬಂದ ಹನುಮ ಅ.ಪ.

ವರ್ಷ ಪರೀಧಾವಿ ಶುಭಾ । ಮಾಸ ।

ವೈಶಾಖ ನಿಜ ವಿಶಾಖಾಭಾ

ದಾಸನ ಮನೆಗತಿ ಪ್ರಭಾ । ಯುತ ।

ಆ ಸಮೀರನು ಅಸ್ಮಲ್ಲಾಭಾ ॥

ಹರ್ಷದಲಿ ಹನುಮಂತರಾಯರ ।

ವಶದಿ ಇದ್ದವನಲ್ಪ ಕಾಲದಿ

ವಶವ ಪಡಿಸಲು ವೆಂಕಟಾರ್ಯಗೆ ।

ನಸುಕಿಲೀ ನಸನಗುತ ಬಂದ 1

ಧರಿಸೀಹ ತುಲಸೀಯ ಮಾಲಾ ।

ಮತ್ತೆ ಪರಿ ಪರಿ ಪುಷ್ಪಗಳ್ಮಾಲಾ

ಶಿರದಿ ಕಿರೀಟವು ಬಹಳಾ । ಮಣಿ ।

ವರ ಖಚಿತ ರತ್ನ ವಿಶಾಲಾ

ಪರಿ ಪರಿಯ ಆಭರಣ ಭೂಷಿತ ।

ಸುರ ವಿರೋಧಿಗಳ್ಹನನ ಶಕುತ

ನೆರೆ ಸುವಾನರ ಸೈನ್ಯ ಪರಿವೃತ ।
ಹರಿಯಲಿಂ ಪಟ್ಟಾಭಿಷಕ್ತ 2
ಭಕ್ತಿರಿಂ ಭೂಷಿತಸ ರಜತ । ಕವಚ ।
ಉತ್ತಮ ಪರಿಯಾಲಂಕೃತ
ಸುಸ್ಥಿರ ದಾಸರ ಆಗತ ।
ನವರಾತ್ರಿ ಅಷ್ಟಮಿಲಾದ್ರುತ
ಕೃತ್ತಿವಾಸಾದ್ಯಮರ ವಂದಿತ ।
ಭೃತ್ಯ ದಶರಥ ಸುತಗೆ ಎನಿಸುತ
ಕರ್ತೃ ಗುರು ಗೋವಿಂದ ವಿಠಲನ ।
ನಿತ್ಯ ಸೇವಾಸಕ್ತ ಮಾರುತ 3
18
ಪುರಂದರ ದಾಸರಾಯಾ । ನಮಿಸೆ ನಿಮ್ಮ
ಚರಣ ಸರಸೀರುಹವಾ ಪ
ಮೊರೆಹೊಕ್ಕ ಜನರ ನೀ । ಪೊರೆಯದೆ ಬಿಡುವರೆ
ವರಪ್ರಹ್ಲಾದ್ ಗರುಹಿದಂ । ತರುಹು ಮಂತ್ರಾರ್ಥಿವ ಅ.ಪ.
ದ್ವಾರಕ ಪುರದೊಳಗೆ । ನರ್ತನ ಗೈಯ್ಯೆ
ವಾರ ಕಾಂತೆಯರೆಲ್ಲರೂ ।
ಭೋರಿಟ್ಟು ಮೊರೆಯುವ । ಸ್ವರಕೇಳಿ ಸುರರೆಲ್ಲ
ಹರಿಯ ಓಲಗವಾರು । ಹೊಗುವರು ಎಂದರು 1
ಬಂದನು ಮುನಿ ನಾರದ । ಪೋಗುವೆ ನಾ
ನೆಂದು ದ್ವಾರಕೆಗೆ ತಾನೆಂದ ।

ಸಿಂಧು ಶಯನ ಗೋ । ವಿಂದನೆ ಪೊರೆಯೆಂದು

ಇಂದರೆ ಯರಸನಾ । ನಂದ ಓಲಗ ಸೇರ್ದ 2

ಷೋಡಶಧ್ವಯ ಸ್ವರದಿ । ಮೈ ಮರೆಯುತ್ತ

ಪಾಡಿ ಪೊಗಳ ಮುದದೀ ।

ಮೃಡವಂದ್ಯ ಹರಿಯವನ । ಕಡುಭಕುತಿಗೆ ಮೆಚ್ಚಿ

ನೀಡುವೆ ವರವ ನೀ । ಬೇಡು ಬೇಡನೆ ಪೇಳ್ದ 3

ಎಚ್ಚತ್ತು ಮುನಿ ನೋಡಿದ । ನಗುತಿರ್ಪ

ಅಚ್ಚ್ಯುತನ್ನಾ ಬೇಡಿದ ।

ಸಚ್ಚಾರಿತ್ರನೆ ಕೇಳು । ನಿಚ್ಚಾಟೆನ್ನಯ ಕೂಡೆ

ಪೆಚ್ಚ ಪೇರ್ಮಲಿ ಆಡು । ಲಕ್ಷಣಾಗ್ರಜನೇ 4

ಕಲಿ ಪ್ರಾಬಲ್ಯದ ಯುಗದೀ । ನಿನ್ನಯ ಇಷ್ಟ

ಸಲಿಸೂವೆ ತೆರಳೆನಲೂ ।

ಕಲಿಕಾಲ ಬರುವಂದು । ಒಲಿಮೇಲಿ ನರಜನ್ಮ

ತಾಳುತ ಪುರಂದರ । ಗಡದಲ್ಲುದೀಸಿದ 5

ಚಿನಿವಾರ ವರದನಲ್ಲೀ । ಜನಿಸುತ್ತ

ಧನ ನವಕೋಟಿಯ ಗಳಿಸೀ ।

ಘನ ಲೋಭಿ ದ್ವಿಜನ । ಜ್ಞಾನೋದಯ ಮಾಡುತ

ಘನಗುಣ ಸಿರಿಪತಿ । ಅಣುಗನ್ನ ಪೊರೆದ 6

ಅಂದಿನ್ಮೊಚನ ಮನಕೆ । ಶ್ರೀ ಹರಿ ತಾ

ತಂದು ಸಲಿಸಿದ ಅವನಿಗೇ ।

ಹಿಂದೆ ಮುಂದೆ ಬಂದು । ಪೊಂದಿ ನಿಂದಾಡ್ದ ನಾ
ರಂದ ರೂಪನು ಪುರಂದರ  ದಾಸರ 7
ಹಿರಿಯ ವೈರಾಗ್ಯ ಪೊಂದಿ । ಸಕಲವನ್ನು
ಸಿರಿಕೃಷ್ಣಗರ್ಪಣೆಂದೀ ।
ಗುರು  ವ್ಯಾಸರಲಿ ಪುರಂ । ದರನೆಂಬಂಕಿತ ಪೊಂದಿ
ಪರಿಸರ ಮತ ಸರ್ವೋತ್ತಮವೆಂದು ಬರೆದಂಥ 8
ಪದಪದ್ಯ ಸೂಳ್ವಾದಿಯ । ಪಾದೊನದಿ
ಪದಪಂಚ ಲಕ್ಷವ ರಚಿಸೀ ।
ಮೋದ  ತೀರ್ಥರ ಶಾಸ್ತ್ರ । ಸಾರ  ವಿಸ್ತಾರದಿ
ವೇದ ಗಮ್ಯಾನಂದ । ಮಯನ ಬೋಧಿಸಿದ 9

ನಾಲ್ಕಾರು ಜನ ಶಿಷ್ಯರ । ಜ್ಞಾನೀಗಳ
ಲೋಕೋದ್ಧಾರಕೆ ಈಯುತೆ ಕಾಕು
ಮಾಯ್ಮತಗಳ । ಸಾಕಷ್ಟು ಖಂಡಿಸಿ
ಮಾಕಳತ್ರನ ಮಹಿಮೆ । ಮನೆಮನೆ ಬೀರಿದ 10
ಮಾಸ  ಪುಷ್ಯವದ್ಯದೀ । ಪರಮೋತ್ತಮ
ಶಶಿ  ರವಿಗಳ ಮೇಳದೀ ।
ರಸೆಯ ತ್ಯಜಿಸಿ ಗುರು  ಗೋವಿಂದ ವಿಠಲನ
ಎಸೆವ ಪಾದಗಳ್ಗಸಜ । ಸೇರುತ ಮೆರೆದಾ 11

19

ಪವಮಾನವಿಠಲ । ಕಾಪಾಡೊ ಇವನಾ ಪ

ಭುವಿ ಭವ್ಯ ಮರುತಮತ । ದೀಕ್ಷೆಯುಳ್ಳವನಾ ಅ.ಪ.

ಭಾವಿಮಾರುತರ ದಿವ್ಯ । ಪಾದಗಳನಾಶ್ರಯಿಸಿ

ದೇವ ಗುಹ್ಯವು ಎಂಬ । ಆಖ್ಯಾನ ಪಠಿಸೀ

ಭಾವಭಕ್ತಿಯಲಿಂದ । ಪೂರಿತನು ತಾನಾಗಿ

ಧಾವಿಸಿ ಬಂದಿಹನೊ । ಎನ್ನ ಬಳಗಾಗಿ 1

ಗುರುವನುಗ್ರಹ ಪಡೆದು । ಗುರುದತ್ತ ಅಂಕಿತವ

ನೆರವಿನಾ ಸಾಧನವ । ವಿರಚಿಸಲು ಮಾರ್ಗ

ಅರಿಯದಲೆ ಪ್ರಾರ್ಥಿಸುವ । ಕರುಣಪಯೋನಿಧಿಯೇ

ಪೊರೆಯ ಬೇಕಿವನ ಪರಿಯ । ಮರುತಾಂತರಾತ್ಮ 2

ತರತಮಜ್ಞಾನವನು । ಹರಿಗುರು ಸದ್ಭಕ್ತಿ

ಪರಿಪರಿಯಲಿಂ ವೃದ್ಧಿ । ಗೈಸಿವಗೆ ಹರಿಯೇ

ಗುರು ಕರುಣ ಕವಚದಿಂ । ಹರಿಯ ಸರ್ವೋತ್ತಮತೆ

ಅರಿವಾಗಲಿವಗೆಂದು । ಪ್ರಾರ್ಥಿಸುವೆ ಹರಿಯೆ 3

ಸತಿಸುತರು ಹಿತರಲ್ಲಿ । ವ್ಯಾಪ್ತ ಶ್ರೀ ಹರಿಯೆಂಬ

ಮತಿಯನೆ ಕರುಣಿಸುತ । ಕಾಪಾಡೊ ಹರಿಯೇ

ಸತತ ತವ ಸ್ಮೃತಿಯಿತ್ತ । ಭವದಿಂದ ಕಡೆಸೆತ್ತು

ವಿತತ ಮಲಗಳ ಮೂರ್ತಿ । ಕೃತಿರಮಣ ದೇವ 4

ಮಧ್ವ ರಮಣನೆ ದೇವ । ಹೃದ್ಯ ಹರಿ ನಿನಕಾಂಬ

ಹೃದ್ಯ ಸಾಧನ ಗೈಸಿ । ಉದ್ಧರಿಸೊ ಇದನಾ

ಶುದ್ಧ ಮೂರುತಿ ಗುರು । ಗೋವಿಂದ ವಿಠಲನೆ

ಬುದ್ಧಿಯಲಿ ನೀನಿಂತು । ಶುದ್ಧ ಮತಿ ಈಯೋ 5

20

ನಿನ್ನ ನಾನೇನೆಂದೆನೋ । ಗುರುವೆ ಜಗದ್ಗುರು

ನಿನ್ನ ನಾನೇನೆಂದೆನೋ ಪ

ನಿನ್ನ ನಾನೇನೆಂದೆ ನಿಖಿಲ ಜೀವರ ಒಡೆಯ

ಪನ್ನಗ ನಗಧೀಶ ಪತಿತೋದ್ಧಾರನದೂತ ಅ.ಪ.

ವಾರಿಧಿಯನೆ ದಾಟಿ । ನಾರಿ ಚೋರನ ಜರೆದು

ನಾರಿ ಗೋಸುಗ ಕೌರವರ ಸವರೀ ॥

ಮಾರಮಣನೆ ಸಾರತಮನೆಂಬ ವೇದಾಂತ

ಸಾರ ಪೇಳ್ವಗೆ ಶರಣೆಂದೆನು ಅಲ್ಲದೇ ।

ಭಾರಿ ಕೋತಿಯು ಎಂದೆನೆ – ಕುಪ್ಪಸ ತೊಟ್ಟು

ನಾರಿಯಾದವನೆಂದನೆ – ಕಾವಿಯನುಟ್ಟು

ಪೋರ ಯತಿಯು ಎಂದೆನೆ – ಕುಭಾಷ್ಯಗ

ಳಾರು ಮೂರೆರಡೊಂದರರಿ ಎಂದೆನಲ್ಲದೆ 1

ನೆರಹಿ ಕಪಿಸೈನ್ಯವ ಶರಧಿಯ ಬಂಧಿಸಿ

ದುರುಳ ರಕ್ಕಸರ ಸಂಹರಸೀ ॥

ಜರೆಯ ಸುತನ ಸೀಳ ಬದರೀಗೆ

ತೆರಳೀದವಗೆ ನಮೊ ಎಂದೆನು ಅಲ್ಲದೇ ॥

ಗಿರಿಯ ಪೊತ್ತವನೆಂದನೆ – ರಕ್ಕಸಿಯ

ಬೆರೆದನೆಂದವ ನೆಂದೆನೆ – ಕೌಪೀನವ

ಧರಿಸಿದವನು ಎಂದೆನೆ – ಸುಜನರ್ಗೆ

ಪರತತ್ವ ಪೇಳ್ದಿವನೆಂದೆನು ಅಲ್ಲದೇ 2

ಕಾಚವಧರಿಸಿ ನಿಶಾಚರ ಸಂಹಾರಿ

ಯಾಚಕನಾಗಿ ಭಿಕ್ಷಾನ್ನವ ಮೆಲ್ಲುತ

ಈ ಚರಾಚರಕೆಲ್ಲ ಕರ್ತು ಹರಿಯೆ ಎಂದು

ನಿಚೋಚ್ಚ ತರತಮ ಪೇಳ್ದೆ ಎಂದಲ್ಲದೆ ॥

ಖೇಚರ ನೀನೆಂದನೆ – ವಿರಾಟನೊಳ್

ಪಾಚಕ ನೀನೆಂದನೆ – ಭವಾಟವಿ

ಮೋಚಕನೇ ಗುರು ಗೋವಿಂದ ವಿಠ್ಠ

ಲಾರ್ಚಕನೆಂದು ಸ್ತುತಿ ಗೈದನಲ್ಲದೆ 3

21

ಜಯ ಗೋಪಾಲ ವಿಠಲ । ದಯೆ ತೋರೋ ಇವಗೇ ಪ

ನಯ ವಿನಯದಿಂ । ನಿನ್ನ । ದಾಸ್ಯಕಾಂಕ್ಷಿಪಗೇ ಅ.ಪ.

ಜ್ಞಾನ ವಿರಹಿತನಾಗಿ । ಅನೇಕ ಜನುಮಗಳು

ಹೀನಯೋನಿಯ ಪೊಂದಿ । ಜನಿಸಿಹನು ಇವನೂ

ಮಾನನಿಧಿ ಮೋಹನ್ನ । ದಾಸರರೊಲಮೆಯಲಂದ

ಆನಂದ ಮುನಿ ಮತದಿ । ತನುವ ಪೊತ್ತಿಹನೊ 1

ಲೇಸು ಮೋಹನರಾಯ । ದಾಸವಂಶದಿ ಬಂದು

ಆಶುಗಾಧ್ಯಾತ್ಮರಾ । ಹಸ್ಯ ವರಿಯದಲೇ

ದಾಸ ದೀಕ್ಷೆಯ ನಡೆಯೆ ಆಶಿಸುತ್ತಿಹಗೆ ಉಪ

ದೇಶವಿತ್ತೆ ನಿನ್ನಾ । ದೇಶ ಸುಸ್ತೀಶಾ 2

ಲೌಕಿಕದ ಬಹು ಮೋಹ । ನೀ ಕಳೆದು ಸುಜ್ಞಾನ

ಭಕುತಿ ವೈರಾಗ್ಯಗಳ । ನೀ ಕೊಡುವುದ್ದರಿಯೇ

ಮಾಕಳತ್ರನೆ ತವಾ । ಲೌಕಿಕಸುಮಹಿಮೆಗಳ

ಸಾಕಷ್ಟು ತಿಳಿಸುತ ಲೋಕದಲಿ ಮೆರೆಸೊ 3

ಬಲ್ಲವರೊಳತಿ ಬಲ್ಲ । ಚೆಲ್ವ ರುಕ್ಮಿಣಿ ಲೋಲ

ಎಲ್ಲೆಡೆಯು ತವವ್ಯಾಪ್ತಿ । ಸೊಲ್ಲು ಸ್ಫುರಿಸುತಲೀ

ಬಲ್ಲಿದನ ಗೈಯ್ಯೆಂಬ । ಸೊಲ್ಲು ಸಲಿಸುವುದ್ದರಿಯೆ

ಖುಲ್ಲ ಜನದಲ್ಲಣನೆ । ಗೊಲ್ಲ ಗೋಪಾಲಾ 4

ಭಾವ ಮೈದುನ ಬಂಡಿ । ಬೋವ ಶ್ರೀಹರಿ ಇವನ

ಶೈವಲಾವರಣ ಕಳೆ । ದೀವುದೋಜ್ಞಾನಾ

ಕೈವಲ್ಯದಾತ ಗುರು । ಗೋವಿಂದ ವಿಠ್ಠಲನೆ

ನೀವೊಲಿಯದಿನ್ನಿಲ್ಲ । ದೇವ ದೇವೇಶಾ 5